**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 13 ಬಿಎಲ್‌ಡಿ 2018
ಅಡಕ:

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು -56001,
ದಿನಾಂಕ:17-11-2020.

## ಹಿಂಬರಹ

**ವಿಷಯ** ಕೋವಿಡ್-19 ಹಿನ್ನಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯಾದ್ಯಂತ ನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ದಿನಾಂಕ:17-11-2020ರಿಂದ ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ:** ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಸಕನಿ : ಇಡಿ-4 : ಸಿಆರ್-28 : 2020-21 ದಿನಾಂಕ:11-11-2020

---

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಕಛೇರಿ ಆದೇಶ ಸಂಖ್ಯೆ:ಸಕನಿ : ಇಡಿ-4 : ಸಿಆರ್-28 : 2020-21 ದಿನಾಂಕ:11-11-2020ಆದೇಶದನ್ವಯ ಅಗತ್ಯ ಕ್ರಮವಹಿಸುವುದು.

ತಮ್ಮ ವಿಶ್ವಾಸಿ

**ಜಂಟಿ ನಿರ್ದೇಶಕರು [ಆ]**
**ತಾಂತ್ರಿಕ ಶಿಕ್ಷಣ ಇಲಾಖೆ.**

ಇವರಿಗೆ:

1. ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕೆ.
2. ಆಯುಕ್ತರ ಆಪ್ತ ಶಾಖೆ - ಮಾಹಿತಿಗಾಗಿ.
3. ನಿರ್ದೇಶಕರ ಆಪ್ತ ಶಾಖೆ - ಮಾಹಿತಿಗಾಗಿ.
4. ಈ-ಆಡಳಿತ ವಿಭಾಗಕ್ಕೆ - ಇಲಾಖಾ ಜಾಲತಾಣದಲ್ಲಿ ಪ್ರಚುರಪಡಿಸಲು.

ಕರ್ನಾಟಕ ಸರ್ಕಾರ

**ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ನಡವಳಿಗಳು**

ವಿಷಯ : ಕೋವಿಡ್-19 ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯಾದ್ಯಂತ ನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ದಿನಾಂಕ 17.11.2020 ರಿಂದ ಪ್ರಾರಂಭಿಸುವ ಬಗ್ಗೆ

ಉಲ್ಲೇಖ 1 ಈ ಕಛೇರಿಯ ಏಕ ಕಡತ ಸಂಖ್ಯೆ ಸಕನಿ: ಇಡಿ-4: ಸಿಆರ್-28 :2020-21 ದಿನಾಂಕ 23.10.2020

2 ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 334 ಯುಎನ್ಇ 2020 ದಿನಾಂಕ 09.11.2020

3 ಸರ್ಕಾರದ ಪತ್ರ ಸಂಖ್ಯೆ ಸಕಇ 255 ಪಕವಿ 2020 ದಿನಾಂಕ 11.11.2020

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ ಉಲ್ಲೇಖ (1) ರ ಈ ಕಛೇರಿಯ ಏಕ ಕಡತದಲ್ಲಿ ದಿನಾಂಕ 23.10.2020 ರಂದು ಮಾನ್ಯ ಮುಖ್ಯಮಂತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಶಿಕ್ಷಣ ಇಲಾಖೆಯ ಸಭೆಯಲ್ಲಿ ದಿನಾಂಕ 17.11.2020 ರಿಂದ ಸ್ನಾತಕೋತ್ತರ ಪದವಿ ಮತ್ತು ಪದವಿ ವಿದ್ಯಾರ್ಥಿಗಳಿಗೆ ಕಾಲೇಜುಗಳನ್ನು ಪ್ರಾರಂಭ ಮಾಡಲು ಸೂಚನೆ ನೀಡಿರುವುದರಿಂದ ರಾಜ್ಯಾದ್ಯಂತ ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ದಿನಾಂಕ 17.11.2020 ರಿಂದ ಪ್ರಾರಂಭಿಸಲು ಆದೇಶ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಉಲ್ಲೇಖ (2) ರ ಉನ್ನತ ಶಿಕ್ಷಣ ಇಲಾಖೆಯ ಆದೇಶದಲ್ಲಿ ದಿನಾಂಕ 17.11.2020 ರಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು/ ಖಾಸಗಿ ವಿಶ್ವವಿದ್ಯಾಲಯಗಳು/ ಸರ್ಕಾರಿ/ ತಾಂತ್ರಿಕ/ ಡಿಪ್ಲಮೋ/ ಅನುದಾನ/ ಅನುದಾನರಹಿತ ಕಾಲೇಜುಗಳನ್ನು ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯಾದ್ಯಂತ ನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ದಿನಾಂಕ 17.11.2020 ರಿಂದ ಪ್ರಾರಂಭಿಸುವ ಬಗ್ಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆರವರ ಹಂತದಲ್ಲಿಯೇ ಆದೇಶ ಹೊರಡಿಸಲು ಸೂಚನೆ ನೀಡಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ**

**ಸಂಖ್ಯೆ: ಸಕನಿ: ಇಡಿ-4: ಸಿಆರ್-28:2020-21** **ದಿನಾಂಕ 11.11.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರಾಜ್ಯಾದ್ಯಂತ ನಿರ್ವಹಿಸುತ್ತಿರುವ ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಈ

ಆದೇಶದೊಂದಿಗೆ ಲಗತ್ತಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು (Standard Operating Procedure- SOP) ಪಾಲಿಸಿ ದಿನಾಂಕ 17.11.2020 ರಿಂದ ಪ್ರಾರಂಭಿಸಲು ಆದೇಶಿಸಿದೆ.

(ಡಾ. ರವಿಕುಮಾರ್ ಸುರಪುರ. ಭಾ.ಆ.ಸೇ)
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಮುಖ್ಯ ಮಂತ್ರಿಗಳವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ವಿಕಾಸ ಸೌಧ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಡಾ.ಕೆ.ಸುದರ್ಶನ್, ಅಧ್ಯಕ್ಷರು, ಕೋವಿಡ್-19 ತಾಂತ್ರಿಕ ಸಲಹಾ ಸಮಿತಿರವರ ಮಾಹಿತಿಗಾಗಿ
9. ಆಯುಕ್ತರು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ/ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರುರವರ ಮಾಹಿತಿಗಾಗಿ.
11. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾಸೌಧ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರುರವರ ಮಾಹಿತಿಗೆ ಮತ್ತು ಮುಂದಿನ ಕ್ರಮಕ್ಕಾಗಿ.
12. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
13. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು
14. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು.
15. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಎಲ್ಲಾ ಜಿಲ್ಲೆಗಳು
16. ತಹಶೀಲ್ದಾರ್, ಎಲ್ಲಾ ತಾಲೂಕುಗಳು
17. ಕಾರ್ಯ ನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ಎಲ್ಲಾ ತಾಲೂಕುಗಳು
18. ಸಹಾಯಕ ನಿರ್ದೇಶಕರು ಗ್ರೇಡ್-1 ಮತ್ತು ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ ಎಲ್ಲಾ ತಾಲೂಕುಗಳು.
19. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ಸಮಾಜ ಕಲ್ಯಾಣ ಇಲಾಖೆ

# ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಇಲಾಖೆಯಿಂದ ರಾಜ್ಯಾದ್ಯಂತ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು 2020-21 ನೇ ಸಾಲಿಗೆ ಪುನರಾರಂಭಿಸುವ ಬಗ್ಗೆ ಪ್ರಮಾಣಿತ ಕಾರ್ಯಾಚರಣೆ ವಿಧಾನ

# (STANDARD OPERATING PROCEDURE- SOP)

## ವಿಷಯ ಸೂಚಿ


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಪೀಠಿಕೆ | 3 |
| 2 | ವಿದ್ಯಾರ್ಥಿ ನಿಲಯಗಳನ್ನು ಸ್ವಚ್ಛಗೊಳಿಸುವ ಬಗ್ಗೆ | 4 |
| 3 | 2020-21 ನೇ ಸಾಲಿಗೆ ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಬಗ್ಗೆ | 7 |
| 4 | ಶಿಕ್ಷಕರು/ವಾರ್ಡನ್‌ಗಳು/ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳು | 9 |
| 5 | ಅಡುಗೆ ಕೋಣೆ ಮತ್ತು ಊಟದ ಕೋಣೆಯ ನಿರ್ವಹಣೆ ಬಗ್ಗೆ | 12 |
| 6 | ವಿದ್ಯಾರ್ಥಿ ನಿಲಯಗಳಲ್ಲಿ ಸಾಮಾಜಿಕ ಅಂತರ ಕಾಯ್ದು ಕೊಳ್ಳುವಿಕೆ ಬಗ್ಗೆ | 13 |
| 7 | ಕೋವಿಡ್ ವೈರಸ್ ಹಿನ್ನೆಲೆಯಲ್ಲಿ ಸ್ವಚ್ಛತೆ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅರಿವು ಮೂಡಿಸುವ ಬಗ್ಗೆ | 14 |
| 8 | ವಿದ್ಯಾರ್ಥಿ ನಿಲಯಗಳ ಒಳಗೆ ಪೋಷಕರು ಮತ್ತು ಅನ್ಯ ವ್ಯಕ್ತಿಗಳ ಪ್ರವೇಶ ಬಗ್ಗೆ | 15 |
| 9 | ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡುವ ಬಗ್ಗೆ | 16 |

# ಪೀಠಿಕೆ

- ಕೋವಿಡ್-19 ವೈರಸ್ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ 23 ಮಾರ್ಚ 2020 ರಿಂದ ರಾಜ್ಯದಾದ್ಯಂತ ಲಾಕ್‌ಡೌನ್ ಘೋಷಿಸಿ, ಸೆಕ್ಷನ್ 144 ಜಾರಿಗೊಳಿಸಿರುತ್ತದೆ.
- ಈ ಹಿನ್ನೆಲೆಯಲ್ಲಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿದ್ದರಿಂದ ಇಲಾಖೆಯ ವಸತಿ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಿಗೂ ರಜೆ ಘೋಷಿಸಿ ವಿದ್ಯಾರ್ಥಿಗಳನ್ನು ತಮ್ಮ ಮನೆಗಳಿಗೆ ಕಳುಹಿಸಲಾಗಿದೆ.
- ಇಲಾಖೆಯ ವಸತಿ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ನಿರಾಶ್ರಿತ ಕೇಂದ್ರಗಳನ್ನಾಗಿ ಪರಿವರ್ತಿಸಿ ನಿರಾಶ್ರಿತರಿಗೆ ಮತ್ತು ವಲಸೆ ಕಾರ್ಮಿಕರಿಗೆ ವಾಸ್ತವ್ಯ ಕಲ್ಪಿಸಿ ಉಚಿತ ಊಟ ಮತ್ತು ಇತರೇ ಅಗತ್ಯ ಸಾಮಗ್ರಿಗಳನ್ನು ಒದಗಿಸಲಾಗಿದೆ.
- ಅದೇ ರೀತಿ ಲಾಕ್‌ಡೌನ್ ನಂತರ ರಾಜ್ಯಕ್ಕೆ ವಾಪಾಸಾದ ವಿದ್ಯಾರ್ಥಿಗಳು, ವಲಸೆ ಕಾರ್ಮಿಕರನ್ನು ನಿಯಮಗಳನ್ವಯ 14 ದಿನ ಕ್ವಾರಂಟೈನ್‌ನಲ್ಲಿ ಇಡಲಾಗಿದೆ.
- ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ ಮತ್ತು ಪದವಿ, ಸ್ನಾತಕೋತ್ತರ ಪದವಿಗಳ ಅಂತಿಮ ಸೆಮಿಸ್ಟರ್ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಯನ್ನು ಸಮರ್ಪಕವಾಗಿ ಕಲ್ಪಿಸಲಾಗಿತ್ತು.
- ಉನ್ನತ ಶಿಕ್ಷಣ ಇಲಾಖೆಯ ಆದೇಶ ದಿನಾಂಕ 09.11.2020 ರಲ್ಲಿ ದಿನಾಂಕ 17.11.2020 ರಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು/ ಖಾಸಗಿ ವಿಶ್ವವಿದ್ಯಾಲಯಗಳು/ ಸರ್ಕಾರಿ/ ತಾಂತ್ರಿಕ/ ಡಿಪ್ಲಮೋ/ಅನುದಾನ/ಅನುದಾನರಹಿತ ಕಾಲೇಜುಗಳನ್ನು ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.
- ಅದೇ ರೀತಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯು ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಸಂಭಂದಿಸಿದ ಇಲಾಖೆಗಳೊಂದಿಗೆ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ. ಸದ್ಯದಲ್ಲಿಯೇ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಅವರು ತಮ್ಮ ನಿರ್ಣಯ ತಿಳಿಸುವ ಸಾಧ್ಯತೆ ಇದೆ.
- ಆದುದರಿಂದ ಶಾಲಾ ಕಾಲೇಜುಗಳು ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಇಲಾಖೆಯ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.
- ಈ ಹಿನ್ನೆಲೆಯಲ್ಲಿ ದಿನಾಂಕ 05.11.2020 ರಂದು ನಡೆದ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ನೀಡಿದ ಸೂಚನೆಗಳಂತೆ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕಾಗಿದೆ.
- ಇಲಾಖೆಯ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಕಾರ್ಯವಿಧಾನಗಳನ್ನು ಹೊರಡಿಸಬೇಕಾಗಿರುತ್ತದೆ. ಅದರಂತೆ ಈ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದರ ಜೊತೆಗೆ ಉನ್ನತ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆಗಳು ಮತ್ತಿತರೇ ಇಲಾಖೆಗಳು ನೀಡುವ ಮಾರ್ಗಸೂಚಿಗಳನ್ನೂ ಸಹಾ ಪಾಲನೆ ಮಾಡುವುದು.

## ವಿದ್ಯಾರ್ಥಿ ನಿಲಯಗಳನ್ನು ಸ್ವಚ್ಛಗೊಳಸುವ ಬಗ್ಗೆ

- ಈಗಾಗಲೇ ಕೆಲವು ವಿದ್ಯಾರ್ಥಿನಿಲಯಗಳು/ವಸತಿ ನಿಲಯಗಳನ್ನು ಕ್ವಾರಂಟೈನ್ ಕೇಂದ್ರ / ಆಶ್ರಯ ಕೇಂದ್ರಗಳನ್ನಾಗಿ ಮಾಡಿಕೊಂಡಿರುವುದರಿಂದ, ಕರೋನಾ ವೈರಸ್ ರೋಗದ ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ ಸದರಿ ಕಟ್ಟಡಗಳಿಗೆ ಕಡ್ಡಾಯವಾಗಿ 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಬಳಸಿ Sanitisation ಕಾರ್ಯ ಕೈಗೊಂಡು, 24 ಗಂಟೆಗಳ ನಂತರ ಬಳಕೆ ಮಾಡಿಕೊಳ್ಳುವುದು. ಈ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ದಿನಾಂಕ:22.5.2020ರಂದು ಮತ್ತು ತದನಂತರ ಹೊರಡಿಸಿರುವ ಮಾದರಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದು. ಈ ಬಗ್ಗೆ DHO & District Covid surveillance officer ರವರನ್ನು ಸಂಪರ್ಕಿಸಿ ಅಗತ್ಯ ಸಲಹೆಗಳನ್ನು ಪಡೆಯುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳ ಸ್ವಚ್ಛತೆ ಮತ್ತಿತರೇ ಅಂಶಗಳ ಬಗ್ಗೆ ಮೇಲುಸ್ತುವಾರಿ ಮಾಡಲು ಪ್ರತಿ ವಿದ್ಯಾರ್ಥಿ ನಿಲಯಕ್ಕೆ ಒಂದು ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು. ಈ ಕುರಿತು ಜಿಲ್ಲಾಧಿಕಾರಿಗಳವರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನದಲ್ಲಿ ವಿವಿಧ ಇಲಾಖೆಗಳ ಪ್ರತಿನಿಧಿಗಳನ್ನು ಒಳಗೊಂಡ ವಿದ್ಯಾರ್ಥಿ ನಿಲಯವಾರು ಸಮಿತಿಗಳನ್ನು ರಚಿಸುವುದು.
- Sanitisationನ್ನು ಗ್ರಾಮ ಪಂಚಾಯತ್/ ಪುರಸಭೆ/ ಪಟ್ಟಣ ಪಂಚಾಯತ್/ ನಗರಸಭೆ/ ಮಹಾನಗರಪಾಲಿಕೆ/ ಬಿಬಿಎಂಪಿಯ ಆರೋಗ್ಯ ಘಟಕಗಳಿಂದ ಕೈಗೊಳ್ಳುವುದು / ಸದರಿ ವೆಚ್ಚವನ್ನು ಎನ್‌ಡಿಆರ್‌ಎಫ್ ಅಥವಾ ಎಸ್‌ಡಿಆರ್‌ಎಫ್ ಯೋಜನೆಯಡಿ ಭರಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳವರಿಂದ ಅಗತ್ಯ ಬೆಂಬಲ ಪಡೆಯಲು ಮತ್ತು ಸಮನ್ವಯ ಮಾಡಲು ಇಲಾಖೆಯಿಂದ ಕೋರುವುದು. ಅಂತಿಮವಾಗಿ ಇಲಾಖೆಯ ಅನುದಾನದಲ್ಲಿ ಭರಿಸುವುದು.
- ಕ್ವಾರಂಟೈನ್/ನಿರಾಶ್ರಿತ ಕೇಂದ್ರಗಳಲ್ಲಿನ ವಸತಿ ಶಾಲೆಗಳ/ವಿದ್ಯಾರ್ಥಿ ನಿಲಯಗಳಲ್ಲಿ ಒಂದು ವೇಳೆ COVID-19 +ve ಇರುವ ವ್ಯಕ್ತಿ ವಾಸವಿದ್ದುದು ಕಂಡುಬಂದಲ್ಲಿ, ಅಂತಹ ವಸತಿ ಶಾಲೆಗಳ/ವಿದ್ಯಾರ್ಥಿನಿಲಯಗಳಲ್ಲಿನ Bed spreads/ದಿಂಬು ಕವರ್‌ಗಳು/ಹೊದಿಕೆಗಳನ್ನು ಡೆಟ್ಟಾಲ್/ಸ್ಯಾವ್‌ಲಾನ್ ಮಿಶ್ರಿತ ಬಿಸಿ ನೀರಿನಲ್ಲಿ ನೆನಸಿ, ಡಿಟರ್ಜೆಂಟ್ ನಿಂದ ತೊಳೆದು, ಬಿಸಿಲಿನಲ್ಲಿ ಒಣಗಿಸಿ, ಐರನ್ ಮಾಡಿಸಿ ಮರು ಬಳಕೆ ಮಾಡಿಕೊಳ್ಳುವುದು.
- ವಿದ್ಯಾರ್ಥಿಗಳ ಉಪಯೋಗಕ್ಕೆ ಒದಗಿಸಿರುವ ಸ್ಪ್ರಿಂಗ್/ ಕಾಯರ್ ಹಾಸಿಗೆಗಳನ್ನು ಕಡ್ಡಾಯವಾಗಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುವುದು ಹಾಗೂ ಹಾಸಿಗೆ ಹೊದಿಕೆಗಳನ್ನು (ಜಮಖಾನ, ಚೆಕ್‌ಬೆಡ್‌ಶೀಟ್, ಬೆಡ್ ಸ್ಪ್ರೆಡ್) ಸೋಪು ನೀರಿನಿಂದ ಸ್ವಚ್ಛಗೊಳಸಿ, 70 ಡಿಗ್ರಿಯಿಂದ 90 ಡಿಗ್ರಿಯವರೆಗಿನ ಸೆಂಟಿಗ್ರೇಡ್ ತಾಪಮಾನದ ನೀರಿನಲ್ಲಿ ನೆನೆಸಿ, ಬಿಸಿಲಿನಲ್ಲಿ ಒಣಗಿಸುವುದು. ಅಂತೆಯೇ ಸೊಳ್ಳೆ ಪರದೆಗಳನ್ನು ಸೋಪು ನೀರಿನಿಂದ ತೊಳೆದು, ಬಿಸಿಲಿನಲ್ಲಿ ಒಣಗಿಸಿ ನಂತರ ವಿದ್ಯಾರ್ಥಿಗಳ ಬಳಕೆಗೆ ಒದಗಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ವಾಸ್ತವ್ಯದ ಕೊಠಡಿಗಳು, ಊಟದ ಕೊಠಡಿಗಳು, ಗ್ರಂಥಾಲಯ, ಕ್ರೀಡಾ ಸಾಮಗ್ರಿಗಳ ಕೊಠಡಿಗಳನ್ನು 1% ಸೋಡಿಯಂ

ಹೈಪೋಕ್ಲೋರೈಟ್ ದ್ರಾವಣವನ್ನು ಅಥವಾ 2.5% ಲೈಸೋಲ್‌ನ್ನು ಅಥವಾ ಸಮಾನಾಂತರ ದ್ರಾವಣವನ್ನು ಬಳಸಿ ಸ್ವಚ್ಛಗೊಳಿಸುವುದು.

- ಪದೇ ಪದೇ ಉಪಯೋಗಿಸುವ ಹ್ಯಾಂಡ್ ರೈಲ್, ಡೋರ್ ನಾಬ್ ಮತ್ತು ಮೆಟ್ಟಿಲುಗಳು, ಕಂಪ್ಯೂಟರ್ ಕೀ ಬೋರ್ಡ ಮತ್ತು ಮೌಸ್, ಟೆಲಿಫೋನ್, ಸ್ವಿಚ್ ಬೋರ್ಡ ಮತ್ತಿತರೇ ಸಾಮಗ್ರಿಗಳ ಮೇಲ್ಪದರವನ್ನು (Surface) ನ್ನು ಆಗಿಂದಾಗ್ಗೆ ಸ್ವಚ್ಛ ಮಾಡುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ಬಯೋಮೆಟ್ರಿಕ್, ಲಾಕರ್ಸ್, ಟೇಬಲ್ಸ್, ಚೇರು, ವಾರ್ಡ್‌ರೋಬ್‌ಗಳು, ಬೆಂಚುಗಳು, ಕಪಾಟುಗಳು, ಬಕೆಟ್‌ಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಬಳಸಿ, ಸ್ವಚ್ಛಗೊಳಿಸುವುದು.
- ವಿದ್ಯಾರ್ಥಿಗಳ ವಾಸ್ತವ್ಯದ ಕೊಠಡಿಗಳಲ್ಲಿರುವ ಮಂಚಗಳು, ಫ್ಯಾನ್‌ಗಳು, ಜಿಂಕ್ ಟ್ರಂಕ್‌ಗಳು, ಪೀಠೋಪಕರಣಗಳು ಹಾಗೂ ಪಾಠೋಪಕರಣಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಉಪಯೋಗಿಸಿ ಸ್ಯಾನಿಟೈಸ್ ಮಾಡಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿನ ಕನ್ನಡಿಗಳು ಮತ್ತು ಕಿಟಕಿ ಗಾಜುಗಳನ್ನು ಬಿಸಿನೀರು ಮತ್ತು ಡಿಟರ್ಜೆಂಟ್ ಹಾಗೂ ತೇವದ ಬಟ್ಟೆಯಿಂದ ಒರೆಸುವುದು ನಂತರ ಒಣಗಿದ ಬಟ್ಟೆಯಿಂದ ಸುತ್ತಲೂ ಒರೆಸಿ, ಒಣಗಿಸುವುದು.
- ವಿದ್ಯಾರ್ಥಿಗಳು ಉಪಯೋಗಿಸುವ ಶಾಲಾ ಬ್ಯಾಗು, ಲೇಖನ ಸಾಮಗ್ರಿಗಳು ಇತ್ಯಾದಿಗಳನ್ನು ಶುಚಿಯಾಗಿಟ್ಟುಕೊಳ್ಳಲು ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡುವುದು.
- ವಿದ್ಯಾರ್ಥಿಗಳು ಶೂ-ಸಾಕ್ಸ್‌ಗಳನ್ನು ಸಾಧ್ಯವಾದಷ್ಟೂ ಕೊಠಡಿಯ ಹೊರಗಡೆ ಇಡಲು ಕ್ರಮವಹಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ನಿಲಯಾರ್ಥಿಗಳು ಬಳಕೆ ಮಾಡುವ ಸಮವಸ್ತ್ರಗಳು ಹಾಗೂ ದೈನಂದಿನ ಬಳಕೆಯ ಇತರೇ ಉಡುಪುಗಳನ್ನು ಕಡ್ಡಾಯವಾಗಿ ಪ್ರತಿ ದಿನ ತೊಳೆದು, ಬಿಸಿಲಿನಲ್ಲಿ ಒಣಗಿಸಿ ಉಪಯೋಗಿಸುವಂತೆ ತಿಳುವಳಿಕೆ ನೀಡುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳ ಸುತ್ತ-ಮುತ್ತ ಮಳೆ/ಕೊಳಚೆ ನೀರು ನಿಲ್ಲದಂತೆ ನಿಗಾವಹಿಸುವುದು. ನಗರಸಭೆ/ಪುರಸಭೆ/ಪಟ್ಟಣ ಪಂಚಾಯತಿ/ ಗ್ರಾಮ ಪಂಚಾಯತಿ / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಿ anti larvae activities/treatment ಮಾಡಿಸಿ ಸೊಳ್ಳೆಗಳ ಹಾವಳಿಯನ್ನು ನಿಯಂತ್ರಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿನ ಎಲ್ಲಾ ಕೊಠಡಿಗಳಲ್ಲಿ ಉತ್ತಮವಾದ ನೈಸರ್ಗಿಕ ಗಾಳಿ ಮತ್ತು ಬೆಳಕು ಇರುವಂತೆ ನೋಡಿಕೊಳ್ಳುವುದು.
- ನೀರಿನ ಸಂಪ್ ಮತ್ತು ಓವರ್ ಹೆಡ್ ಟ್ಯಾಂಕ್‌ಗಳನ್ನು ಚೆನ್ನಾಗಿ ಸ್ವಚ್ಛಗೊಳಿಸುವುದು. ಓವರ್ ಹೆಡ್ ಟ್ಯಾಂಕ್‌ಗಳನ್ನು ಕಡ್ಡಾಯವಾಗಿ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಮುನ್ನ ಶುಚಿಗೊಳಿಸಬೇಕು. ಈಗಾಗಲೇ ಶುಚಿಗೊಳಿಸಿದ್ದಲ್ಲಿ ಪುನ: ಸ್ವಚ್ಛಗೊಳಿಸಿ ಅದನ್ನು ತೆರೆದಿಡದೇ ಮುಚ್ಚಳದಿಂದ ಮುಚ್ಚಬೇಕು. ಸ್ವಚ್ಛ ಮಾಡಿದ ದಿನಾಂಕವನ್ನು ಒಂದು ರಿಜಿಸ್ಟರ್‌ನಲ್ಲಿ ನಮೂದಿಸಬೇಕು.

- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ಅಡುಗೆ ಕೋಣೆ, ಪಾತ್ರೆ ಪರಿಕರಗಳು ಹಾಗೂ ಇತರೇ ಸಾಮಗ್ರಿಗಳನ್ನು ಡಿಟರ್ಜೆಂಟ್ ಮಿಶ್ರಿತ ಸೋಪು ನೀರಿನಿಂದ ನಿಯಮಿತವಾಗಿ ಸ್ವಚ್ಛಗೊಳಿಸುವುದು.
- ನಿಲಯಗಳು/ವಸತಿ ಶಾಲೆಗಳಲ್ಲಿನ ತ್ಯಾಜ್ಯ ಸಾಮಗ್ರಿಗಳನ್ನು ಬಹಳ ಸಮಯ ಇಡದೇ ನಿಗದಿತ ಸ್ಥಳದಲ್ಲಿ ಇರಿಸಿ ಪ್ರತಿದಿನ ವಿಲೇವಾರಿಗೊಳಿಸತಕ್ಕದ್ದು.
- ಅನುಪಯುಕ್ತ ಸಾಮಗ್ರಿಗಳನ್ನು ಒಂದು ಕೊಠಡಿಯಲ್ಲಿ ಇರಿಸಿ ಕೂಡಲೇ ಅವುಗಳನ್ನು ನಿಯಾಮಾನುಸಾರ ವಿಲೇ ಮಾಡಲು ಕ್ರಮವಹಿಸುವುದು.
- ಹಾಲಿ ಇರುವ ಕಟ್ಟಡದಲ್ಲಿ ಹೆಚ್ಚುವರಿ ಕಾಮಗಾರಿಗಳು ನಡೆಯುತ್ತಿದ್ದಲ್ಲಿ, ಅನುಪಯುಕ್ತ ಸಾಮಗ್ರಿಗಳನ್ನು (ಡೆಬ್ರಿಸ್) ಕೂಡಲೇ ತೆರವುಗೊಳಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಮದ್ಯಪಾನ, ಧೂಮಪಾನ, ಗುಟ್ಕಾ, ತಂಬಾಕು ಇತರೇ ಹಾನಿಕಾರಕ ಪದಾರ್ಥಗಳನ್ನು ಸೇವಿಸುವುದನ್ನು ಮತ್ತು ಉಗುಳುವುದನ್ನು ನಿಷೇಧಿಸಿರುವ ವಿವರವನ್ನು ಸೂಚನಾ ಫಲಕಗಳಲ್ಲಿ ಪ್ರಕಟಿಸುವುದು.
- ವಿದ್ಯಾರ್ಥಿ ನಿಲಯ /ವಸತಿ ಶಾಲೆಗಳನ್ನು ಸ್ವಚ್ಛಗೊಳಿಸಲು ಬೇಕಾಗಿರುವ ಸಾಮಗ್ರಿಗಳನ್ನು, ಥರ್ಮಲ್ ಸ್ಕ್ಯಾನರ್, ಪಲ್ಸ್ ಆಕ್ಸಿ ಮೀಟರ್, ಹ್ಯಾಂಡ್ ಸ್ಯಾನಿಟೈಸರ್, ಫೂಟ್ ಆಪರೇಟೆಡ್ ಸ್ಯಾನಿಟೈಸರ್ ಸ್ಟಾಂಡ್ ಮುಂತಾದುವುಗಳನ್ನು ನಿಯಾಮಾನುಸಾರ ಖರೀದಿಸಿ ವೆಚ್ಚವನ್ನು ವಿದ್ಯಾರ್ಥಿ/ವಸತಿ ನಿಲಯಗಳ ನಿರ್ವಹಣೆ ಲೆಕ್ಕ ಶೀರ್ಷಿಕೆ/ ರಾಜ್ಯ ವಲಯದಿಂದ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸುವುದು.

## 2020-21 ನೇ ಸಾಲಿಗೆ ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಬಗ್ಗೆ

- ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶದಂತೆ ದಿನಾಂಕ 17.11.2020 ರಿಂದಲೇ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವುದು.
- ಅದೇ ರೀತಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹೊರಡಿಸುವ ಮಾರ್ಗಸೂಚಿಗಳಂತೆ ಶಾಲೆ ಪ್ರಾರಂಭಿಸುವ ದಿನವೇ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸತಕ್ಕದ್ದು. ಈ ಕುರಿತು ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು.
- ಕಂಟೇನ್‌ಮೇಂಟ್ ಝೋನ್ ಎಂದು ಗುರುತಿಸಿರುವ ವಲಯದಲ್ಲಿರುವ ವಿದ್ಯಾರ್ಥಿ ನಿಲಯಗಳನ್ನು ಆ ವಲಯವನ್ನು ಡಿನೋಟಿಫೈ ಮಾಡುವವರೆಗೆ ಪ್ರಾರಂಭಿಸಬಾರದು.
- ಹೊಸ ವಿದ್ಯಾರ್ಥಿಗಳನ್ನು ದಾಖಲಿಸುವ ಬಗ್ಗೆ ನಂತರದಲ್ಲಿ ತಿಳಿಸಲಾಗುವುದು. ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ಸಾಮಾಜಿಕ ಅಂತರ ಕಾಯ್ದುಕೊಂಡು ಅವರಿಗೆ ವಾಸ್ತವ್ಯ ಕಲ್ಪಿಸಬೇಕು.
- ವಿದ್ಯಾರ್ಥಿ ನಿಲಯದ ಕಟ್ಟಡದಲ್ಲಿನ ಸ್ಥಳಾವಕಾಶದ ಲಭ್ಯತೆ ಆಧರಿಸಿ ಸಾಮಾನ್ಯ ಸನ್ನಿವೇಶಗಳಲ್ಲಿ ವಾಸ್ತವ್ಯ ಕಲ್ಪಿಸಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಮೊದಲು ನಿರ್ಧರಿಸಿ ಆ ಸಂಖ್ಯೆಯ ಶೇ.50ರಷ್ಟು ಸಂಖ್ಯೆಯ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡತಕ್ಕದ್ದು.
- ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳು ಈ ಹಿಂದೆ ವ್ಯಾಸಾಂಗ ಮಾಡಿದ್ದರೆ, ಪ್ರಸ್ತುತ ಕೋವಿಡ್-19 ಹಿನ್ನೆಲೆಯಲ್ಲಿ ವಿದ್ಯಾರ್ಥಿ ನಿಲಯದ ಮಂಜೂರಾತಿ ಸಂಖ್ಯೆಯನ್ನು base ಆಗಿ ಇಟ್ಟುಕೊಂಡು, ಸಾಮಾಜಿಕ ಅಂತರ ಕಾಯ್ದುಕೊಂಡು ಸದರಿ ಮಂಜೂರಾತಿ ಸಂಖ್ಯೆ 50% ರಷ್ಟು ವಿದ್ಯಾರ್ಥಿಗಳನ್ನು ಮಾತ್ರ ದಾಖಲಿಸಿಕೊಳ್ಳುವುದು.

  ಉದಾ: ಮಂಜೂರಾತಿ ಸಂಖ್ಯೆ 100 ಇದ್ದು, ಕೋವಿಡ್ ಪೂರ್ವದಲ್ಲಿ ದಾಖಲಾತಿ 175 ಆಗಿದ್ದರೆ, ಪ್ರಸ್ತುತ ಕೋವಿಡ್ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಪರಿಗಣಿಸಿ 50 ವಿದ್ಯಾರ್ಥಿಗಳನ್ನು ಮಾತ್ರ ದಾಖಲಿಸಿಕೊಳ್ಳುವುದು.

  ಈ ಒಂದು ಉದಾಹರಣೆಯನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ನೀಡುವುದು.
- ನವೀಕರಣ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಲ್ಲಿ ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ತಾತ್ಕಾಲಿಕವಾಗಿ ವ್ಯವಸ್ಥೆ ಕಲ್ಪಿಸತಕ್ಕದ್ದು.
- ಆದಾಗ್ಯೂ ಸ್ಥಳಾವಕಾಶ ಕಡಿಮೆ ಇದ್ದಲ್ಲಿ ಬಾಡಿಗೆ ಕಟ್ಟಡಗಳನ್ನು ಪಡೆದು ವಾಸ್ತವ್ಯಕ್ಕೆ ಅವಕಾಶ ಕಲ್ಪಿಸುವುದು. ಹೊಸದಾಗಿ ಬಾಡಿಗೆ ಕಟ್ಟಡಗಳನ್ನು ಪಡೆಯುವ ಮುನ್ನ ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಅನುಮತಿ ಪಡೆಯುವುದು. ಲೋಕೋಪಯೋಗಿ ಇಲಾಖೆಯು ನಿಗಧಿಪಡಿಸುವ ಬಾಡಿಗೆಯಂತೆ ಆರ್ಥಿಕ ಇಲಾಖೆಯು ಪ್ರತ್ಯಾಯೋಜಿಸಿರುವ ಸಾಮಾನ್ಯ ಆರ್ಥಿಕ ಅಧಿಕಾರದಂತೆ ಜಿಲ್ಲಾ ಮಟ್ಟದಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆದು ಬಾಡಿಗೆ ಪಾವತಿಸುವುದು.
- ಬಾಡಿಗೆ ಪಡೆಯುವ ಕಟ್ಟಡದ ಪೂರ್ಣ ದಾಖಲಾತಿಗಳನ್ನು ಪಡೆದು, ಮಾಲೀಕರೊಂದಿಗೆ ಕರಾರು ಪತ್ರ ಮಾಡಿಕೊಳ್ಳತಕ್ಕದ್ದು.

- ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಆದ್ಯತೆ:
  1. ಆಫ್‌ಲೈನ್ ತರಗತಿಗಳಿಗೆ ಹಾಜಾರಾಗುವ ಸ್ನಾತಕೋತ್ತರ ಮತ್ತು ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಬೇಕು. ಇದರಲ್ಲಿಯೂ ಕೆಳಗಿನಂತೆ ಆದ್ಯತಾ ಕ್ರಮ ಅನುಸರಿಸಬೇಕು.
     - ವಿಕಲಚೇತನರಿಗೆ ಆದ್ಯತೆ
     - ಶಿಕ್ಷಣ ಸಂಸ್ಥೆಗೂ ವಿದ್ಯಾರ್ಥಿಯ ವಾಸಸ್ಥಳಕ್ಕೂ ಇರುವ ಅಂತರ : ಅತೀ ಹೆಚ್ಚಿನ ದೂರದ ಸ್ಥಳಗಳಿಂದ ಬಂದ ವಿದ್ಯಾರ್ಥಿಗಳಿಗೆ ಆದ್ಯತೆ.
     - ಶಿಕ್ಷಣ ಸಂಸ್ಥೆಗಳಿಗೆ ಹತ್ತಿರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ನಂತರದ ಆದ್ಯತೆ.
  2. ನಂತರದ ಆದ್ಯತೆ ಆನ್‌ಲೈನ್ ತರಗತಿಗಳಿಗೆ ಹಾಜಾರಾಗುವ ಸ್ನಾತಕೋತ್ತರ ಮತ್ತು ಅಂತಿಮ ಪದವಿ ವಿದ್ಯಾರ್ಥಿಗಳಿಗೆ ನೀಡಬೇಕು.
  3. ಸ್ನಾತಕೋತ್ತರ ಮತ್ತು ಅಂತಿಮ ವರ್ಷದ ಕೋರ್ಸುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಇತರೇ ವಿದ್ಯಾರ್ಥಿಗಳಿಗೆ ಕೊನೆಯ ಆದ್ಯತೆ ನೀಡುವುದು.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯು ಹೊರಡಿಸುವ ಮಾರ್ಗಸೂಚಿಗಳನ್ನು ಪರಿಶೀಲಿಸಿ ನಂತರ ಮಾರ್ಗಸೂಚಿ ನೀಡಲಾಗುವುದು.
- ಮೊದಲ ದಿನವೇ ವಿದ್ಯಾರ್ಥಿಗಳಿಗೆ ನೀಡಬೇಕಾದ ಅಗತ್ಯ ಮೂಲಭೂತ ಸಾಮಗ್ರಿಗಳನ್ನು ನೀಡುವುದು.

## ಶಿಕ್ಷಕರು/ವಾರ್ಡನ್‌ಗಳು/ಸಿಬ್ಬಂದಿಗಳು ಅನುಸರಿಸಬೇಕಾದ ಕ್ರಮಗಳು

- ಕೋವಿಡ್-19 ವೈರಸ್ ಹರಡುವಿಕೆ ಮತ್ತು ಅದನ್ನು ತಡೆಗಟ್ಟಲು ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡುವ ಕುರಿತು ಕೇಂದ್ರ ಕಛೇರಿಯಿಂದ digital training content ನ್ನು ಸಿದ್ಧಪಡಿಸಿ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಲಾಗುವುದು. ಇನ್ನೂ ಹೆಚ್ಚಿನ ತರಬೇತಿ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳ ಸಲಹೆಗಳನ್ನು ಪಡೆಯುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ದೈಹಿಕ ಉಷ್ಣತೆಯನ್ನು ಪರೀಕ್ಷಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಿಗಧಿಪಡಿಸಿರುವ ಉತ್ತಮ ಸ್ಪೆಷಿಫಿಕೇಷನ್ ಹೊಂದಿರುವ "ಥರ್ಮಲ್ ಸ್ಕ್ಯಾನರ್" ಸಾಧನಗಳನ್ನು ಪ್ರತಿ ನಿಲಯಕ್ಕೆ ಒಂದರಂತೆ ಖರೀದಿಸಿ, ಒಬ್ಬ ಸಿಬ್ಬಂದಿಗೆ ತರಬೇತಿ ನೀಡಿ, ವಿದ್ಯಾರ್ಥಿನಿಲಯ ಮತ್ತು ವಸತಿ ಶಾಲೆಗೆ ಬರುವ ಮತ್ತು ಹೋಗುವಂತಹ ಪ್ರತಿ ವಿದ್ಯಾರ್ಥಿಗಳು, ಸಿಬ್ಬಂದಿಗಳು ಮತ್ತು ಪೋಷಕರುಗಳ ಉಷ್ಣತೆಯನ್ನು ಪರೀಕ್ಷಿಸಿ, ನಿರ್ಧಿಷ್ಟ ವಹಿಯಲ್ಲಿ ವಿವರವನ್ನು ದಾಖಲಿಸುವುದು.
- "ಥರ್ಮಲ್ ಸ್ಕ್ಯಾನರ್" ಸಾಧನದಲ್ಲಿ ದೇಹದ ಉಷ್ಣತೆ 37.5 ಡಿಗ್ರಿ ಸೆಂಟಿಗ್ರೇಡ್ (99.5 ಡಿಗ್ರಿ ಫಾರೆನ್‌ಹೀಟ್) ಅಥವಾ ಅದಕ್ಕಿಂತ ಹೆಚ್ಚು ಇದ್ದಲ್ಲಿ ಅವರನ್ನು ವಿದ್ಯಾರ್ಥಿ ನಿಲಯದ ಒಳಗೆ ಬಿಡಬಾರದು. ಅವರನ್ನು ಸಮೀಪದ ಫೀವರ್ ಕ್ಲಿನಿಕ್‌ಗೆ ಕರೆದುಕೊಂಡು ಹೋಗತಕ್ಕದ್ದು ಮತ್ತು ಕೋವಿಡ್-19 ಪರೀಕ್ಷೆಗೆ ಒಳಪಡಿಸತಕ್ಕದ್ದು. ಈ ಹಿಂದೆ ಸೂಚನೆ ನೀಡಿದಂತೆ ವಿದ್ಯಾರ್ಥಿ ನಿಲಯ, ಸಂಭಂದಿಸಿದ ಆಸ್ಪತ್ರೆ ಮತ್ತು ಟೆಸ್ಟಿಂಗ್ ಸೆಂಟರ್‌ಗಳನ್ನು ಮ್ಯಾಪಿಂಗ್ ಮಾಡಿಕೊಳ್ಳುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿಗಳು/ಸಿಬ್ಬಂದಿಗಳು/ ಪೋಷಕರುಗಳ ಉಪಯೋಗಕ್ಕಾಗಿ ನಿಲಯದ ಪ್ರವೇಶ ದ್ವಾರದಲ್ಲಿ ಕನಿಷ್ಟ 60% ಆಲ್ಕೋಹಾಲ್ ಆಧಾರಿತ ಹ್ಯಾಂಡ್ ಸ್ಯಾನಿಟೈಸರ್‌ನ್ನು ಕಡ್ಡಾಯವಾಗಿ ಇಟ್ಟು ನಿಲಯ/ವಸತಿ ಶಾಲೆಗಳಿಗೆ ಒಳಗಡೆ ಬರುವಾಗ ಮತ್ತು ಹೊರಗೆ ಹೋಗುವಾಗ ಕಡ್ಡಾಯವಾಗಿ ಬಳಸುವಂತೆ ಸೂಚನೆ ನೀಡುವುದು.
- ಕೋವಿಡ್-19 ವೈರಸ್‌ನ ಲಕ್ಷಣಗಳಾದ ಜ್ವರ, ಕೆಮ್ಮು, ಗಂಟಲು ನೋವು, ಉಸಿರಾಡಲು ತೊಂದರೆ ಮುಂತಾದ ಲಕ್ಷಣಗಳು ವಿದ್ಯಾರ್ಥಿಗಳಲ್ಲಿ/ಸಿಬ್ಬಂದಿಗಳಲ್ಲಿ ಕಂಡು ಬಂದ ತಕ್ಷಣವೇ ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಹೋಗಿ ಪರೀಕ್ಷೆಗೊಳಪಡಿಸಿ, ಸೂಕ್ತ ಚಿಕಿತ್ಸೆಯನ್ನು ಪಡೆಯಲು ಕ್ರಮ ವಹಿಸುವಂತೆ ತಿಳಿಸತಕ್ಕದ್ದು.
- ಇಂತಹ ವಿದ್ಯಾರ್ಥಿಗಳಿಗೆ ಒಂದು ಕೊಠಡಿಯನ್ನು ಐಸೋಲೇಷನ್ ರೂಂ ಎಂದು ಪರಿವರ್ತಿಸಬೇಕು. ಈ ಕೊಠಡಿಗೆ ಹತ್ತಿರ ಇರುವ ಒಂದು ಶೌಚಾಲಯ ಮತ್ತು ಒಂದು ಸ್ನಾನ ಗೃಹವನ್ನು ಈ ವಿದ್ಯಾರ್ಥಿಗಳಿಗೆಂದೇ ಪ್ರತ್ಯೇಕವಾಗಿ ಕಾಯ್ದಿರಿಸುವುದು. ಯಾವುದೇ ಕಾರಣಕ್ಕೂ ಕೋವಿಡ್ ಪಾಸಿಟಿವ್ ಆಗಿರುವ ವಿದ್ಯಾರ್ಥಿಯನ್ನು ವಿದ್ಯಾರ್ಥಿ ನಿಲಯದಲ್ಲಿ ಇರಲು ಅವಕಾಶ ಕಲ್ಪಿಸಬಾರದು. ಪರೀಕ್ಷಾ ವರದಿ ಬಂದ ತಕ್ಷಣ ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ, ವಿದ್ಯಾರ್ಥಿಯನ್ನು ಕೋವಿಡ್ ಕೇರ್ ಸೆಂಟರ್/ ಡೆಡಿಕೇಟೆಡ್ ಕೋವಿಡ್ ಹಾಸ್ಪಿಟಲ್‌ಗೆ ಸೇರಿಸುವುದು.

- ತೀವ್ರತರ/ಗಂಭೀರ ಕಾಯಿಲೆಗಳಾದ ಮಧುಮೇಹ, ಮೂತ್ರಪಿಂಡದ ಕಾಯಿಲೆ, ಹೃದಯ ರೋಗ, ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳಿಂದ ಬಳಲುತ್ತಿಲ್ಲ ಎಂಬ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪಡೆದು ನಂತರ ಪ್ರವೇಶ ನೀಡುವುದು.
- ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ವಿದ್ಯಾರ್ಥಿಯಿಂದ ಕೆಳಕಂಡ ದಾಖಲಾತಿ ಪಡೆಯುವುದು.
  1. ಕೋವಿಡ್-19 RT-PCR negative ಪ್ರಮಾಣ ಪತ್ರ (less than 72 hrs old)
  2. ಭೌತಿಕವಾಗಿ ಕಾಲೇಜು ತರಗತಿಗಳಿಗೆ ಹಾಜರಾಗಲು ಸಿದ್ಧರಿರುವ ಬಗ್ಗೆ ಅವರ ಪೋಷಕರಿಂದ ಉನ್ನತ ಶಿಕ್ಷಣ ಇಲಾಖೆಯು ನಿಗಧಿಪಡಿಸಿದ ನಮೂನೆಯಲ್ಲಿ ಒಪ್ಪಿಗೆ ಪತ್ರ (ಕಾಲೇಜಿಗೆ ನೀಡುವ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು)
  3. ವಿದ್ಯಾರ್ಥಿ ನಿಲಯಕ್ಕೆ ದಾಖಲಾಗುವ ಕುರಿತು ಪೋಷಕರ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.
- ಇದೇ ರೀತಿ ವಿದ್ಯಾರ್ಥಿ ನಿಲಯದ ಸಿಬ್ಬಂದಿಗಳೂ ಸಹಾ RT-PCR negative ಪ್ರಮಾಣ ಪತ್ರವನ್ನು (less than 72 hrs old) ಸಲ್ಲಿಸಬೇಕು.
- ಕೋವಿಡ್-19 ಪಾಸಿಟಿವ್ ಎಂದು ಧೃಡಪಟ್ಟಲ್ಲಿ ಅವರನ್ನು ಸ್ಥಳೀಯ ಕೋವಿಡ್ ಐಸೋಲೇಷನ್ ವಾರ್ಡಗೆ ದಾಖಲಿಸುವುದು ಮತ್ತು ಅವರ ತಂದೆ-ತಾಯಿಯವರಿಗೆ ವಿಷಯ ತಿಳಿಸುವುದು. ವಿದ್ಯಾರ್ಥಿಗಳು ಗುಣಮುಖ ಆಗುವವರೆಗೆ ಇವರನ್ನು ಇಲಾಖೆಯ ಅಧಿಕಾರಿಗಳು/ಸಿಬ್ಬಂದಿಗಳು ಮೇಲ್ವಿಚಾರಣೆ ಮಾಡತಕ್ಕದ್ದು.
- ಕೋವಿಡ್-19 ವೈರಸ್ ಸೋಂಕಿನಿಂದ ಅನಾರೋಗ್ಯಕ್ಕೆ ಒಳಗಾದವರನ್ನು ಕೋವಿಡ್ ಕೇರ್ ಸೆಂಟರ್/ ಡೆಡಿಕೇಟೆಡ್ ಕೋವಿಡ್ ಹಾಸ್ಪಿಟಲ್‌ಗೆ ಸೇರಿಸುವ ತನಕ ಅವರಿಗೆ ಎನ್-95 ಮಾಸ್ಕ್ ನೀಡುವುದು ಮತ್ತಿತರೇ ಅವಶ್ಯಕ ಕ್ರಮ ಕೈಗೊಳ್ಳುವುದು.
- ವೈದ್ಯಕೀಯ ಸಮಾಲೋಚನೆಗಾಗಿ ಹತ್ತಿರದ ಸರ್ಕಾರಿ ಆಸ್ಪತ್ರೆ/ಕ್ಲಿನಿಕ್ ಅಥವಾ ಎಸ್‌ಪಿಓಸಿ (ಸಿಂಗಲ್ ಪಾಯಿಂಟ್ ಆಫ್ ಕಾಂಟ್ಯಾಂಕ್ಟ್) ಯನ್ನು ಸಂಪರ್ಕಿಸುವುದು. ಹೆಚ್ಚಿನ ವಿವರಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ "ಆಪ್ತಮಿತ್ರ" ಸಹಾಯವಾಣಿ ಸಂಖ್ಯೆ: 14410 ಹಾಗೂ ರಾಜ್ಯ ಸರ್ಕಾರದ ಸಹಾಯವಾಣಿ ಸಂಖ್ಯೆ: 104 ನ್ನು ಸಂಪರ್ಕಿಸುವಂತೆ ತಿಳಿಸುವುದು. ಅಂತೆಯೇ ಮೊಬೈಲ್ ಹೊಂದಿರುವ ವಿದ್ಯಾರ್ಥಿಗಳು "ಆರೋಗ್ಯ ಸೇತು" ಆಪ್‌ನ್ನು ಕಡ್ಡಾಯವಾಗಿ ಬಳಸಲು ಸೂಚನೆ ನೀಡುವುದು.
- ಆಸ್ಪತ್ರೆಗಳ ಸುತ್ತ ಮುತ್ತ ಇರುವ ವಿದ್ಯಾರ್ಥಿ ನಿಲಯಗಳನ್ನು ಗುರುತಿಸಿ, ಅಲ್ಲಿನ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ಒಳಗಾದಾಗ ತುರ್ತು ಅಂಬ್ಯುಲೆನ್ಸ್ ಸೇವೆ ಪಡೆದು ಅದೇ ಆಸ್ಪತ್ರೆಗೆ ದಾಖಲಿಸಬೇಕು.
- ವಿದ್ಯಾರ್ಥಿನಿಲಯಗಳು, ವಸತಿ ಶಾಲೆಗಳಲ್ಲಿನ ನಿಲಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಬಟ್ಟೆಯಿಂದ ತಯಾರಿಸಿರುವ ಮಾಸ್ಕ್‌ಗಳನ್ನು (Reusable cotton Mask) ಕಡ್ಡಾಯವಾಗಿ ಒದಗಿಸಿ, ಅವುಗಳ ಬಳಕೆ ಬಗ್ಗೆ ತಿಳಿಸಬೇಕು (ಮಾಸ್ಕ್‌ನ್ನು ಮೂಗು ಮತ್ತು ಬಾಯಿಯನ್ನು ಕವರ್ ಮಾಡುವಂತೆ ಧರಿಸಿರಬೇಕು). ಪ್ರತಿ ದಿನ ಅದನ್ನು ಡಿಟರ್ಜೆಂಟ್ ಸಾಬೂನಿನಿಂದ ಸ್ವಚ್ಛಗೊಳಿಸಿ ಇಟ್ಟುಕೊಳ್ಳುವಂತೆ ಸೂಚನೆ ನೀಡಬೇಕು.

- ಪ್ರತಿ ವಿದ್ಯಾರ್ಥಿಗೆ ಶುಚಿ ಸಂಭ್ರಮ ಕಿಟ್ ಜೊತೆಗೆ 100 ಎಂ.ಎಲ್ ಹ್ಯಾಂಡ್ ಸ್ಯಾನಿಟೈಸರ್ ನೀಡುವುದು
- ಸ್ನಾನಗೃಹ ಮತ್ತು ಶೌಚಾಲಯದಲ್ಲಿನ ವಾಷ್ ಬೇಸಿನ ಹತ್ತಿರ ಲಿಕ್ವಿಡ್ ಸೋಪ್/ಜೆಲ್ ಇಟ್ಟಿರಬೇಕು. ಇದನ್ನು ಉಪಯೋಗಿಸಿ ಕೈತೊಳೆಯಲು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಈ ರೀತಿ ಕೈಗಳನ್ನು ಆಗಾಗ್ಗೆ ಸ್ವಚ್ಛಗೊಳಿಸಿಕೊಳ್ಳಬೇಕು.
- ಕೆಮ್ಮುವಾಗ ಮತ್ತು ಸೀನುವಾಗ ಟಿಶ್ಯೂ ಪೇಪರ್/ಕರವಸ್ತ್ರದಿಂದ ಬಾಯಿ ಮತ್ತು ಮೂಗನ್ನು ಮುಚ್ಚಿಕೊಳ್ಳುವುದು ಇಲ್ಲವೇ ಮೊಣಕೈನ್ನು ಬಾಯಿಗೆ ಅಡ್ಡ ಹಿಡಿಯುವುದು. ಬಳಸಿದ ಟಿಶ್ಯೂ ಪೇಪರನ್ನು ಮುಚ್ಚಿರುವ ಡಸ್ಟ್‌ಬಿನ್‌ನಲ್ಲಿ ವಿಲೇವಾರಿಗೊಳಿಸುವುದು. ಉಪಯೋಗಿಸಿದ ಕರವಸ್ತ್ರವನ್ನು ಡಿಟರ್ಜೆಂಟ್ ನೀರಿನಿಂದ ಸ್ವಚ್ಛಗೊಳಿಸುವುದು.
- ವಿದ್ಯಾರ್ಥಿಗಳು ತಮ್ಮ ಕೈಗಳಿಂದ ಮುಖ, ಮೂಗು ಮತ್ತು ಬಾಯಿಯನ್ನು ಪದೇ ಪದೇ ಮುಟ್ಟಿಕೊಳ್ಳದಂತೆ ತಿಳುವಳಿಕೆ ನೀಡುವುದು.
- ವಿದ್ಯಾರ್ಥಿಗಳು ಮನೆಗಳಿಂದ ನಿಲಯಕ್ಕೆ ಬಂದಾಗ ಹಾಗೂ ಶಾಲೆ/ಕಾಲೇಜುಗಳಿಗೆ ಹೋಗಿ ವಿದ್ಯಾರ್ಥಿ ನಿಲಯಕ್ಕೆ ವಾಪಾಸು ಬಂದಾಗ ಕಡ್ಡಾಯವಾಗಿ ಥರ್ಮಲ್ ಸ್ಕ್ಯಾನರ್ ನಿಂದ ದೇಹದ ಉಷ್ಣತೆ ಪರೀಕ್ಷೆ ಮಾಡತಕ್ಕದ್ದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳನ್ನು ಪ್ರಾರಂಭಿಸಿದ ಮೊದಲ ತಿಂಗಳು ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಆಕಸ್ಮಿಕ ಭೇಟಿ ನೀಡಿ, ಪರಿಶೀಲನೆ ನಡೆಸಿ, ವಿವರವನ್ನು ಸಂಬಂಧಪಟ್ಟ ವಹಿಯಲ್ಲಿ ದಾಖಲಿಸುವುದು.
- ಕೋವಿಡ್-19 ಸಾಂಕ್ರಾಮಿಕ ರೋಗದ ಕುರಿತ ರೋಗ ಲಕ್ಷಣಗಳು, ಮುಂಜಾಗ್ರತಾ ಕ್ರಮ, ಸ್ವಚ್ಛತೆ ಕ್ರಮಗಳು ಮತ್ತು ವಿವಿಧ ಸಹಾಯವಾಣಿಗಳ ಸಂಖ್ಯೆ ಕುರಿತ ಮಾಹಿತಿಯ ಸೂಚನಾ ಫಲಕಗಳನ್ನು ಅಳವಡಿಸುವುದು.
- ಕೋವಿಡ್-19 ಕುರಿತ ಮಾರ್ಗಸೂಚಿಗಳನ್ನು ಉಲ್ಲಂಘಿಸುವ ವಿದ್ಯಾರ್ಥಿಗಳಿಗೆ ಮೊದಲನೇ ಹಂತದಲ್ಲಿ ಮೌಖಿಕ ಎಚ್ಚರಿಕೆ ನೀಡುವುದು. ಎರಡನೇ ಬಾರಿ ಉಲ್ಲಂಘಿಸಿದಲ್ಲಿ ಲಿಖಿತ ಎಚ್ಚರಿಕೆ ನೀಡುವುದು. ಮೂರನೇ ಬಾರಿ ಉಲ್ಲಂಘಿಸಿದಲ್ಲಿ ಅಂಥಹ ವಿದ್ಯಾರ್ಥಿಗಳನ್ನು ವಿದ್ಯಾರ್ಥಿ ನಿಲಯದಿಂದ ತೆಗೆದು ಹಾಕುವುದು.

## ಅಡುಗೆ ಕೋಣೆ ಮತ್ತು ಊಟದ ಕೋಣೆಯ ನಿರ್ವಹಣೆ ಬಗ್ಗೆ

- ಖರೀದಿಸಿದ ತರಕಾರಿ, ಹಾಲಿನ ಪ್ಯಾಕೆಟ್‌ಗಳನ್ನು Running water / ಲವಣ ಮಿಶ್ರಿತ ನೀರಿನಿಂದ ಚೆನ್ನಾಗಿ ತೊಳೆದು ನಂತರ ಉಪಯೋಗಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ಆಹಾರ ದಾಸ್ತಾನು ಕೊಠಡಿಗಳಲ್ಲಿ ಸಂಗ್ರಹವಾಗಿರುವ ಆಹಾರ ಸಾಮಗ್ರಿಗಳು ಹಾಗೂ ತರಕಾರಿಗಳನ್ನು ಬಳಕೆ ಮಾಡುವ ಮೊದಲು ಕಡ್ಡಾಯವಾಗಿ ಲವಣ ಮಿಶ್ರಿತ ನೀರಿನಿಂದ/ ರನ್ನಿಂಗ್ ವಾಟರ್‌ನಿಂದ ಚೆನ್ನಾಗಿ ಸ್ವಚ್ಛಗೊಳಿಸಿ ಅಡುಗೆ ಮಾಡಲು ಬಳಸತಕ್ಕದ್ದು.
- ಉಗ್ರಾಣ ಕೊಠಡಿಗಳಲ್ಲಿ ಆಹಾರ ಧಾನ್ಯಗಳನ್ನು ಪ್ರತ್ಯೇಕವಾಗಿ ಕಂಟೈನರ್‌ಗಳಲ್ಲಿ ಶೇಖರಿಸಿಡಬೇಕು. ಹಣ್ಣು, ತರಕಾರಿಗಳನ್ನು ಪ್ರತ್ಯೇಕಿಸಿ ಸ್ವಚ್ಛವಾಗಿ ಇಡತಕ್ಕದ್ದು. ಸದರಿ ಕೊಠಡಿಯಲ್ಲಿ ಕ್ರಿಮಿಕೀಟಗಳು ಬರದಂತೆ ಆಹಾರ ಧಾನ್ಯ ಮತ್ತು ಹಣ್ಣು ಮತ್ತು ತರಕಾರಿಗಳನ್ನು ಸಂರಕ್ಷಿಸತಕ್ಕದ್ದು.
- ಕುಕ್ವೇರ್, ತಟ್ಟೆಗಳು, ಲೋಟಗಳು ಮತ್ತು ಸ್ಪೂನ್‌ಗಳನ್ನು ಊಟ ಮಾಡಿದ ನಂತರ ಡಿಟರ್ಜೆಂಟ್/ಡಿಶ್‌ವಾಷ್ ಸೋಪಿನಿಂದ ಸ್ವಚ್ಛಗೊಳಸತಕ್ಕದ್ದು.
- ವಿದ್ಯಾರ್ಥಿ ನಿಲಯದ ಊಟದ ಕೋಣೆ ಚಿಕ್ಕದಿದ್ದು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ವಿದ್ಯಾರ್ಥಿಗಳಿಗೆ ಪಾಳಿಯಲ್ಲಿ (ಬ್ಯಾಚ್ ಗಳಲ್ಲಿ) ಊಟ ನೀಡುವುದು.
- ಅಡುಗೆಯವರು/ಅಡುಗೆ ಸಹಾಯಕರು ಅಡುಗೆ ಮಾಡುವಾಗ ಹಾಗೂ ಬಡಿಸುವಾಗ ಕಡ್ಡಾಯವಾಗಿ ಮಾಸ್ಕ್, ಹೆಡ್ ಕವರ್ ಮತ್ತು ಏಪ್ರಾನ್ ಧರಿಸತಕ್ಕದ್ದು. ವಿದ್ಯಾರ್ಥಿಗಳಿಗೆ ಆಹಾರ ಬಡಿಸುವಾಗ ಕಡ್ಡಾಯವಾಗಿ transparent gloves ಧರಿಸುವುದು ಇಲ್ಲವೇ ಜೆಲ್ ಸೋಪ್ ನಿಂದ ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.
- ಅಡುಗೆಯನ್ನು ತಾಜಾ/ಫ್ರೆಶ್ ಆಗಿ ತಯಾರಿಸಿ ನೀಡುವುದು.
- ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವುದು. ಶುದ್ಧ ಕುಡಿಯುವ ನೀರಿನ ಘಟಕಗಳು ಸುಸ್ಥಿಯಲ್ಲಿರುವಂತೆ ಕ್ರಮವಹಿಸುವುದು. ಶುದ್ಧ ಕುಡಿಯುವ ನೀರಿನ ಘಟಕಗಳು ಇಲ್ಲದಿರುವ ಕಡೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಖರೀದಿಸುವುದು.
- ವಿದ್ಯಾರ್ಥಿಗಳು ಊಟವನ್ನು ಹಂಚಿಕೊಳ್ಳುವುದನ್ನು ತಡೆಯಬೇಕು. ಒಂದೇ ತಟ್ಟೆಯಲ್ಲಿ ಇಬ್ಬರು-ಮೂವರು ವಿದ್ಯಾರ್ಥಿಗಳು ಊಟ ಮಾಡಬಾರದು.
- ಬಯೋಮೆಟ್ರಿಕ್ ಹಾಜಾರಾತಿ ಪಡೆಯುವ ಬಗ್ಗೆ ನಂತರ ಮಾರ್ಗಸೂಚಿ ನೀಡಲಾಗುವುದು. ಅಲ್ಲಿಯವರಗೂ ಮ್ಯಾನ್ಯುಯಲ್ ಆಗಿ ಹಾಜಾರಾತಿ ಪಡೆಯುವುದು.

## ವಿದ್ಯಾರ್ಥಿ ನಿಲಯಗಳಲ್ಲಿ ಸಾಮಾಜಿಕ ಅಂತರ ಕಾಯ್ದು ಕೊಳ್ಳುವಿಕೆ ಬಗ್ಗೆ

- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ಕನಿಷ್ಟ ಒಂದು ಮೀಟರ್ ದೈಹಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಅರಿವು ಮೂಡಿಸುವುದು.
- ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ವಾಸ್ತವ್ಯ ಕೊಠಡಿಗಳಲ್ಲಿನ ಮಂಚಗಳನ್ನು/ಕಾಟ್‌ಗಳನ್ನು ವಿದ್ಯಾರ್ಥಿಗಳು ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಅನುಕೂಲವಾಗುವಂತೆ arrange ಮಾಡಿ ವಾಸ್ತವ್ಯಕ್ಕೆ ವ್ಯವಸ್ಥೆಗೊಳಿಸುವುದು.
- ಪ್ರೇಯರ್ ಅಸೆಂಬ್ಲಿ ಮತ್ತು ಕ್ರೀಡಾಕೂಟಗಳನ್ನು ರದ್ದುಮಾಡುವುದು, ಒಟ್ಟಿಗೇ ಗುಂಪುಗೂಡುವುದನ್ನು ನಿಷೇದಿಸುವುದು.

## ಕೋವಿಡ್ ವೈರಸ್ ಹಿನ್ನೆಲೆಯಲ್ಲಿ ಸ್ವಚ್ಚತೆ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅರಿವು ಮೂಡಿಸುವ ಬಗ್ಗೆ

- ಕೋರೋನಾ ವೈರಸ್ ಹರಡುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ವೈಯುಕ್ತಿಕ ಆರೋಗ್ಯದ ಬಗ್ಗೆ ತಜ್ಞರ ಮೂಲಕ ಅರಿವು ಮೂಡಿಸಬೇಕು.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಮಕ್ಕಳಿಗೆ ನಿಯಮಿತವಾಗಿ ನೀಡುವ ಲಸಿಕೆಗಳನ್ನು ನೀಡಲಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.
- ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಸೋಂಕಿತರ/ಶಂಕಿತರನ್ನು ಹಿಯಾಳಿಸಬಾರದು. ಅವರ ಬಗ್ಗೆ ಸಹಾನುಭೂತಿಯಿಂದ ವರ್ತಿಸಿ ಅವರ ಮನೋಸ್ಥೈರ್ಯ ಹೆಚ್ಚಿಸಲು ಅಗತ್ಯ ಕ್ರಮವಹಿಸುವುದು.
- ನಿಲಯ ಮತ್ತು ವಸತಿ ಶಾಲೆಗಳಲ್ಲಿನ ನಿಲಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪೋಷಕರುಗಳನ್ನೊಳಗೊಂಡಂತೆ ಓರಿಯೆಂಟೇಷನ್ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.
- ವಿದ್ಯಾರ್ಥಿಗಳಿಗೆ ಆಯುಷ್ ಇಲಾಖೆಯ ಕಷಾಯ ನೀಡುವುದು. ಇದನ್ನು ಕಾಫಿ, ಟೀ ಬದಲಿಗೆ ಇಲ್ಲವೇ ಹೆಚ್ಚುವರಿಯಾಗಿ ನೀಡಬಹುದು. ಆಯುಷ್ ಇಲಾಖೆಯಿಂದ ಪ್ರತಿ ವಿದ್ಯಾರ್ಥಿಗೆ ಇಮ್ಯೂನಿಟಿ ಬೂಸ್ಟ್‌ರ್ ಕಿಟ್ ನೀಡಲಾಗುತ್ತದೆ. ಇದನ್ನು ಒಂದು ತಿಂಗಳ ಕಾಲ ಉಪಯೋಗಿಸಿದರೆ ಅವರಿಗೆ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ.

## ವಿದ್ಯಾರ್ಥಿ ನಿಲಯಗಳಲ್ಲಿ ಪೋಷಕರು ಮತ್ತು ಅನ್ಯ ವ್ಯಕ್ತಿಗಳ ಪ್ರವೇಶ ಬಗ್ಗೆ

- ವಿದ್ಯಾರ್ಥಿ ನಿಲಯ/ವಸತಿ ಶಾಲೆಗಳ ಆವರಣಕ್ಕೆ ಪ್ರವೇಶಿಸುವಂತಹ ಸಿಬ್ಬಂದಿಗಳ ದ್ವಿಚಕ್ರ ವಾಹನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು. ಹ್ಯಾಂಡಲ್ ಮತ್ತು ಸೀಟ್ ಕವರ್‌ನ್ನು ಸೋಂಕು ಮುಕ್ತಗೊಳಿಸುವಂತೆ ಕ್ರಮ ವಹಿಸುವುದು.
- ಯಾವುದೇ ವ್ಯಕ್ತಿಗೆ 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಸಿಂಪಡಿಸಬಾರದು ಮತ್ತು ಸ್ಯಾನಿಟೈಸೇಷನ್ ಟನೆಲ್ ಮೂಲಕ ಹಾದು ಹೋಗಲು ಸೂಚಿಸಬಾರದು.
- ತ್ಯಾಜ್ಯಗಳನ್ನು ಸಂಗ್ರಹಿಸುವ ವಾಹನ ಚಾಲಕರು ಮತ್ತು ಲೋಡರ್‌ಗಳು ವಿದ್ಯಾರ್ಥಿನಿಲಯ/ವಸತಿ ಶಾಲೆಯನ್ನು ಪ್ರವೇಶಿಸುವ ಮುನ್ನ ಕೋವಿಡ್ ವೈರಸ್‌ನ ಲಕ್ಷಣಗಳು ಇರುವ ಬಗ್ಗೆ ಪರೀಕ್ಷಿಸಬೇಕು ಹಾಗೂ ತ್ಯಾಜ್ಯ ಸಂಗ್ರಹ ಪ್ರದೇಶ ವ್ಯಾಪ್ತಿಯೊಳಗೆ ಮಾತ್ರ ಪ್ರವೇಶಕ್ಕೆ ಅನುಮತಿಸುವುದು.
- ನಿಲಯಕ್ಕೆ ಒಳ ಬರುವ ಮತ್ತು ಹೊರಹೋಗುವ ನಿಲಯಾರ್ಥಿಗಳು, ಸಿಬ್ಬಂದಿಗಳು ಮತ್ತು ಇತರೇ ಅನ್ಯ ವ್ಯಕ್ತಿಗಳ ವಿವರವನ್ನು ಸಂಗ್ರಹಿಸಲು ಕ್ರಮಕೈಗೊಳ್ಳುವುದು. ಸಿ.ಸಿ.ಟಿ.ವಿ. ಇದ್ದಲ್ಲಿ ಅದರ ಮೂಲಕ ಮಾಹಿತಿ ಸಂಗ್ರಹಿಸುವುದು.
- ನಿಲಯ/ವಸತಿ ಶಾಲೆಗಳಿಗೆ ಪ್ರವೇಶಿಸುವಂತಹ ಎಲ್ಲಾ ಸಿಬ್ಬಂದಿಗಳು ಮತ್ತು ಇತರೇ ಅನ್ಯ ವ್ಯಕ್ತಿಗಳು ಮಾಸ್ಕ್ ಧರಿಸಿ ಮತ್ತು ಸ್ಯಾನಿಟೈಸರನ್ನು ಬಳಸಿ ಒಳ ಬರುವಂತೆ ತಿಳಿಸುವುದು.
- ನಿಲಯಕ್ಕೆ ಅನಗತ್ಯವಾಗಿ ಪೋಷಕರು/ಅನ್ಯ ವ್ಯಕ್ತಿಗಳು ಪ್ರವೇಶ ಮಾಡುವುದನ್ನು ತಡೆಯುವುದು.

## ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡುವ ಬಗ್ಗೆ

- ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಸ್ಥಳೀಯ ದಿನಪತ್ರಿಕೆ/ ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ, ಆಕಾಶವಾಣಿ, ದೂರದರ್ಶನಗಳ ಮೂಲಕ ವ್ಯಾಪಕ ಪ್ರಚಾರ ನೀಡುವುದು.
- ವಿದ್ಯಾರ್ಥಿನಿಲಯಗಳು/ವಸತಿ ನಿಲಯಗಳನ್ನು ಕ್ವಾರಂಟೈನ್ ಕೇಂದ್ರ/ಆಶ್ರಯ ಕೇಂದ್ರಗಳನ್ನಾಗಿ ಮಾಡಿಕೊಂಡಿರುವುದರಿಂದ, ಕರೋನಾ ವೈರಸ್ ರೋಗದ ಸೋಂಕು ಹರಡುವಿಕೆಯನ್ನು ನಿಯಂತ್ರಿಸುವ ಸಲುವಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ವಚ್ಛಗೊಳಸಲು ಇಲಾಖೆಯು 1% ಸೋಡಿಯಂ ಹೈಪೋಕ್ಲೋರೈಟ್ ದ್ರಾವಣವನ್ನು ಬಳಸಿ ಸಂಪೂರ್ಣ ಕಟ್ಟಡ ಮತ್ತು ಆವರಣವನ್ನು Sanitise ಮಾಡಿರುವ ಬಗ್ಗೆ, ಥರ್ಮಲ್ ಸ್ಕ್ಯಾನರ್, ಮಾಸ್ಕ್ ಮತ್ತು ಹ್ಯಾಂಡ್ ಸ್ಯಾನಿಟೈಸರ್ ಒದಗಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಚಾರ ಮಾಡುವುದು.
- ವಿದ್ಯಾರ್ಥಿ ನಿಲಯಗಳನ್ನು ಸ್ವಚ್ಛ ಮಾಡುತ್ತಿರುವ ಛಾಯಾಚಿತ್ರಗಳನ್ನು ಪ್ರಚಾರ ಕಾರ್ಯಕ್ಕೆ ಬಳಸುವುದು.
- ಪೋಷಕರು ಮತ್ತು ಸಾರ್ವಜನಿಕರಲ್ಲಿ ಸಮಾಜ ಕಲ್ಯಾಣ ಇಲಾಖೆಯು ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳ ವ್ಯವಸ್ಥೆ ಕುರಿತು ಭರವಸೆ ಹುಟ್ಟಿಸುವ (confidence building) ನಿಟ್ಟಿನಲ್ಲಿ ಪಾರದರ್ಶಕತೆಯಿಂದ ಕಾರ್ಯನಿರ್ವಹಿಸತಕ್ಕದ್ದು.